ನಾನೇನನ್ನೂ ಮುಚ್ಚುಮರೆ ಮಾಡಲು ಇಷ್ಟಪಡಲ್ಲ. ನಾನು ಮತ್ತು ನನ್ನ ಗಂಡ ಬೇರೆಯಾಗಿ ಅನೇಕ ವರ್ಷಗಳೇ ಆಗಿವೆ. ಆದರೆ ವಿಚ್ಛೇದನದ ಪತ್ರವನ್ನು ಇನ್ನೂ ತೆಗೆದುಕೊಂಡಿಲ್ಲ. ಹಾಗಂತ ಅವರು ಬೇರೆ ಮದುವೆ ಮಾಡಿಕೊಂಡಿದ್ದಾರೆ. ಇಬ್ಬರು ಮಕ್ಕಳೂ ಇದ್ದಾರೆ. ಆದ್ರೆ ಅವರಿಗೆ ನನ್ನ ಮಗನನ್ನು ಕಂಡರೆ ಇಷ್ಟ. ಏನೂ ಸಹಾಯ ಮಾಡದಿದ್ದರೂ ಎರಡು ಮೂರು ವಾರಕ್ಕೆ ಒಂದ್ಸಲ ಬಂದು ಅವನನ್ನು ನೋಡ್ಕೊಂಡು ಹೋಗ್ತಾರೆ. ಆದ್ರೆ ಅವರು ನಮ್ಮ ಮದುವೆ ಆದ ಮೇಲೆ ಬರಲ್ಲ. ಮದುವೆಗೆ ಮೊದಲು ವಿಚ್ಛೇದನದ ಪತ್ರ ತಗೊಳ್ತೀನಿ'.

..........

'ನೀವೇಕೆ ಏನೂ ಮಾತಾಡ್ತಿಲ್ಲ?'

'ಕೇಳ್ತಿದ್ದೇನೆ'

'ಇನ್ನೊಂದು ವಿಷಯ ಹೇಳೋದನ್ನು ಮರೆತೆ. ನನಗೊಬ್ಬ ತಮ್ಮನಿದ್ದಾನೆ. ಎಂ.ಬಿ.ಎ. ಪಾಸು ಮಾಡಿ ಎರಡು ವರ್ಷಗಳಾಗಿವೆ. ಕೆಲಸ ಸಿಕ್ಕಿಲ್ಲ. ಅವನೂ ನಮ್ಮ ಜೊತೆ ಇರಬಹುದಾ? ಅಲ್ಲಿ ನಿಮಗೆ ಗುರುತು ಪರಿಚಯದವರು ತುಂಬಾ ಜನರಿದ್ದಾರೆ ಅಂತ ಸದಾನಂದರು ಹೇಳಿದರು. ನೀವು ಯಾರಿಗಾದರೂ ಹೇಳಿ ಅವನಿಗೊಂದು ನೌಕರಿ ಕೊಡಿಸಿದರೆ, ಅವನು ತನ್ನ ಜೀವನ ಮಾಡಿಕೊಳ್ತಾನೆ. ನಾನು ನಿಮ್ಮ ಉಪಕಾರವನ್ನು ಎಂದೂ ಮರೆಯಲ್ಲ. ನಾನು ತುಂಬಾ ಮಾತನಾಡಿ ನಿಮಗೆ ಬೋರ್ ಮಾಡಿರಬೇಕು. ನೀವು ಸಹಿಸಿಕೊಳ್ಳಬೇಕು...ನಿಮ್ಮ ದಾರಿ ಕಾಯ್ತೀನಿ ...ಮತ್ತೊಂದು ವಿಷಯ ...ನನ್ನ ತಮ್ಮನಿಗೆ ಮದುವೆಯೂ ಆಗಿದೆ, ಒಂದು ಹೆಣ್ಣು ಮಗುವೂ ಇದೆ...ಬೈ...'

ಆ ಕಡೆಯಿಂದ ಫೋನ್ ಇಟ್ಟ ಸದ್ದು ಕೇಳಿದ ಮೇಲೆ ದೀರ್ಘವಾಗಿ ಮೈಮುರಿದೆ. ಅವಳು ಮತ್ತೆ ಎರಡು ದಿನಗಳ ನಂತರ ಮತ್ತೆ ಫೋನ್ ಮಾಡಿದಳು. ಫೋನ್ ನಂಬರ್ ನೋಡಿ ನಾನು ಫೋನ್ ಎತ್ತಲಿಲ್ಲ. ಅವಳ ಲಿಸ್ಟ್‌ನಲ್ಲಿ ಬಹುಶಃ ಮತ್ತೊಂದಿಷ್ಟು ಜನ ಸೇರಿರಬೇಕೆಂದು ಯೋಚಿಸಿ ಹೆದರಿದೆ. ಒಂದು ವಾರದ ನಂತರ ಎರಡು ದಿನ ಒಂದೇ ಸಮನೆ ಫೋನ್ ಮಾಡಿದಳು. ನಾನು ಫೋನ್ ಎತ್ತಲಿಲ್ಲ.

ಎರಡು ವಾರಗಳ ನಂತರ ಸದಾನಂದ ಕೇಳಿದ, 'ಏನು ನೀನು ಊರಿನಲ್ಲಿ ಇಲ್ವಾ?'

'ಊರಿನಲ್ಲಿದ್ದೇನೆ, ಎಲ್ಲೂ ಹೋಗಿಲ್ಲ'

'ಸರಸ್ವತಿ ತುಂಬಾ ಸಲ ಫೋನ್ ಮಾಡಿದರು, ಆದ್ರೆ ನೀನು ಫೋನೇ ಎತ್ತಲಿಲ್ಲ.'

'ಬೇಕೆಂತಲೇ ಎತ್ತಲಿಲ್ಲ.'

'ನೀನು ಯಾವುದಕ್ಕೂ ಹೇಳಿಬಿಡಬೇಕಿತ್ತು, ಇಂಥ ವ್ಯವಹಾರದಲ್ಲಿ ಹಿಂಜರಿಯಬಾರದು. ನಾನೇ ಎಲ್ಲಾ ಹೇಳಿಬಿಡ್ತೀನಿ' ಎಂದ ಸದಾನಂದ.

ಆಗಲೇ ನಾನು ಸದಾನಂದನಿಗೆ ಇನ್ನು ಸಂಬಂಧ ನೋಡ್ಬೇಡ ಎಂದು ಹೇಳಬೇಕಿತ್ತು.

ನಂತರ ನನಗೆ ಪರಿಚಯವಿದ್ದ ತಾರಾಬಾಯಿ ಒಂದು ಸಂಬಂಧ ತಂದಳು. ಅವಳು ಎರಡು ಮೂರು ದಿನಗಳಿಗೊಮ್ಮೆ ನನ್ನ ಆಫೀಸಿಗೆ ಬಂದು, ನನ್ನ ಜೊತೆ ಹರಟೆ ಹೊಡೆದು, ಕಾಫಿ ಕುಡಿದು ಹತ್ತು ಹದಿನೈದು ನಿಮಿಷಗಳಿದ್ದು ಹೋಗುತ್ತಾಳೆ. ಎಲ್ಲೆಲ್ಲಿಯದೋ ವಿಷಯಗಳನ್ನು ಒಟ್ಟು ಮಾಡಿ ತಂದು ನನ್ನ ಮೇಲೆ ಸುರಿಯುತ್ತಾಳೆ. ಅಂದು ತಾರಾಬಾಯಿ ರಮಾದೇವಿಯ ಸಂಬಂಧ ಪ್ರಸ್ತಾಪಿಸಿದಳು. ರಮಾದೇವಿಯನ್ನು ನಾನು ನೋಡಿಲ್ಲ. ಫೋನ್‌ನಲ್ಲೂ ಮಾತನಾಡಲಿಲ್ಲ. ಅವಳ ವಯಸ್ಸು ನಲವತ್ತೆರಡು, ಅವಳು ಆದಾಯ ತೆರಿಗೆ ಕಚೇರಿಯಲ್ಲಿ ಕೆಲಸ ಮಾಡುತ್ತಾಳೆ' ಎಂದು ತಾರಾಬಾಯಿಯೇ ಹೇಳಿದಳು.

ತಾರಾಬಾಯಿ ಹೇಳಿದಳು, 'ರಮಾಬಾಯಿ ಮತ್ತು ಅವರ ಪರಿವಾರ ಮೊದಲು ನಮ್ಮ ಮನೆಯ ಹತ್ತಿರವೇ ಇತ್ತು. ಕಡೆಗೆ ಅವರು ಮನೆ ಕಟ್ಟಿಕೊಂಡು ಹೋದರು. ಅವಳು ನೋಡಲು ತುಂಬಾ ಚೆನ್ನಾಗಿದ್ದಾಳೆ. ನಲವತ್ತೆರಡು ಆಗಿದ್ದರೂ ಅಷ್ಟು ವಯಸ್ಸಾಗಿದೆ ಎಂದು ಅನ್ನಿಸುವುದಿಲ್ಲ. 30 32 ರ ವಯಸ್ಸು ಅಂತ ಅನ್ನಿಸುತ್ತೆ'.

'ಮನುಷ್ಯರಿಗೆ ಸೌಂದರ್ಯವೇ ಮುಖ್ಯವೇ?' ನಾನು ಪ್ರಶ್ನಿಸಿದೆ.

'ಇಲ್ಲ! ನಾನು ಹೇಳುತ್ತಿದ್ದೇನೆ ಅಷ್ಟೆ. ಹಾಗಂತ ಅವಳು ತುಂಬಾ ಒಳ್ಳೆಯವಳು, ಆದ್ರೆ ಅವಳಿಗೆ ಸ್ವಲ್ಪ ಜಂಭ ಇದೆ.'

'ಅವಳೇಕೆ ಇನ್ನೂ ಮದುವೆಯಾಗಿಲ್ಲ?'

'ಅವಳಿಗಿಷ್ಟವಾದ ವ್ಯಕ್ತಿಯೇ ಸಿಕ್ಕಿಲ್ಲ.'

'ಬಹುಶಃ ನಾನೂ ಇಷ್ಟವಾಗದಿದ್ದರೆ!'

'ನೀವು ಇಷ್ಟವಾಗದಿದ್ದರೆ ಅವಳೇಕೆ ನನ್ನನ್ನು ನಿಮ್ಮ ಹತ್ರ ಕಳುಹಿಸುತ್ತಿದ್ದಳು? ಮೊದಲು ನಾನು ನಿಮ್ಮ ಬಗ್ಗೆ ಹೇಳಿದಾಗ ಅವಳು ಉತ್ಸಾಹ ತೋರಲಿಲ್ಲ. ಕಡೆಗೆ ಅವಳೇ ನಿಮ್ಮ ಬಗ್ಗೆ ಕೇಳಿದಳು. ಅವರಿಗೆ ಎಷ್ಟು ಸಂಬಳ ಬರುತ್ತೆ? ಎಂದು. ನಾನು ಊಹೆ ಮಾಡಿ ಹೇಳಿದಾಗ ಅವಳು, ಒಂಟಿ ಮನುಷ್ಯ ಅಷ್ಟು ಹಣದಿಂದ ಏನು ಮಾಡ್ತಾನೆ? ಎಂದಳು. ನಾನು ನಕ್ಕೆ, ಮಾತನಾಡಲಿಲ್ಲ. ಅವಳು ನಿನ್ನೆ ನಮ್ಮ ಮನೆಗೆ ಬಂದು ಮದುವೆ ಬಗ್ಗೆ ಪ್ರಸ್ತಾಪಿಸಲು ಹೇಳಿದಳು. ಅವಳು ನಾಲ್ಕೈದು ದಿನಗಳ ಹಿಂದೆ ನಿಮ್ಮನ್ನು ಎಲ್ಲೋ ನೋಡಿದ್ದಳು, ಬಹುಶಃ ಅವಳಿಗೆ ನೀವು ಇಷ್ಟವಾಗಿರಬಹುದು. ಆದ್ರೆ ಅವಳೊಂದು ಷರತ್ತು ಹಾಕಿದ್ದಾಳೆ'.

'ಏನದು?'

'ಅವಳ ಹೆಸರಿನಲ್ಲಿ ಐದು ಲಕ್ಷ ಹಣವನ್ನು ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಬೇಕಂತೆ.'

'ಯಾಕೆ?'

'ನಾನು ಕೇಳಲಿಲ್ಲ, ಬಹಶಃ ಸೆಕ್ಯೂರಿಟಿಗಾಗಿ ಇರಬೇಕು. ಜಾಯಿಂಟ್ ಅಕೌಂಟ್‌ನಲ್ಲಿ ಬೇಡ, ಅವಳ ಒಬ್ಬಳ ಹೆಸರಿನಲ್ಲೇ ಇಡಬೇಕಂತೆ'.

ನನಗೆ ನಗು ಬಂತು. ಇದು ತಾರಾಬಾಯಿಯ ಬುದ್ಧಿವಂತಿಕೆಯೋ ಅಥವಾ ಸ್ವಲ್ಪ ವಿದ್ಯಾಭ್ಯಾಸ ಮಾಡಿದ ರಮಾದೇವಿಯದೋ ತಿಳಿಯಲಿಲ್ಲ. ಮೊದಲೇ ಜಮಾ ಮಾಡಿಟ್ಟುಕೊಳ್ಳುವ ತೆರಿಗೆ ಕಚೇರಿಯಂತೆ ಎಂದು ಅನ್ನಿಸಿತು.

'ಫಿಕ್ಸೆಡ್ ಡಿಪಾಜಿಟ್‌ನಲ್ಲೋ ಅಥವಾ ಸೇವಿಂಗ್ಸ್ ಅಕೌಂಟಿನಲ್ಲೋ?'

'ಸೇವಿಂಗ್ಸ್ ಅಕೌಂಟಿನಲ್ಲಿ. ಅವಳು ಪ್ಯಾನ್ ಕಾರ್ಡ್ ನಂಬರ್, ಸೇವಿಂಗ್ಸ್ ಅಕೌಂಟ್ ನಂಬರ್ ಸಹ ಕೊಟ್ಟಿದ್ದಾಳೆ.'

ನನಗೆ ತಾರಾಬಾಯಿ ಮತ್ತು ರಮಾಬಾಯಿ ಇಬ್ಬರೂ ಮೂರ್ಖರಂತೆ ಕಂಡರು. ನನಗೆ ನನ್ನ ಕಂಪನಿಯಲ್ಲಿ ವರ್ಷಕ್ಕೊಮ್ಮೆ ನಡೆಯುವ ವಾರ್ಷಿಕೋತ್ಸವದ ನೆನಪಾಯಿತು.

'ನನ್ನ ಮೇಲೆ ನಂಬಿಕೆಯಿಲ್ಲವೇ?'

'ಗೊತ್ತಿಲ್ಲ.'

'ನಾನು ಅವಳ ಖಾತೆಗೆ ಹಣ ಹಾಕಿದಾಗ, ಅವಳು ತಕ್ಷಣ ಹಣವನ್ನು ಡ್ರಾ ಮಾಡಿಕೊಂಡರೆ?'

'ಒಂದ್ಸಲ ಹಣ ಕಳುಹಿಸಿದರೆ ಅದು ಅವಳಿಗೇ ಸೇರಬೇಕಲ್ವ?'

ನಾನೀಗ ಹೇಳಿದೆ, 'ನೋಡು ತಾರಾ, ಈ ರಮಾದೇವಿ ಯಾರು ಅಂತ ನನಗೆ ಗೊತ್ತಿಲ್ಲ. ಅವಳನ್ನು ನಾನೆಂದೂ ನೋಡೂ ಇಲ್ಲ. ಅವಳ ಬಗ್ಗೆ ನನಗೇನೂ ಗೊತ್ತಿಲ್ಲ. ಅವಳು ನಿನ್ನ ಸ್ನೇಹಿತೆಯಾಗಿರಬಹುದು, ಸುಂದರಿಯೂ ಆಗಿರಬಹುದು.. ಈಗ ಅದಿರ್ಲಿ, ನಾನು ಅಷ್ಟು ಹಣವನ್ನು ಅವಳ ಬ್ಯಾಂಕ್ ಖಾತೆಗೆ ಹಾಕ್ತೀನಿ ಅಂತ ನೀನು ಹೇಗೆ ಯೋಚಿಸಿದೆ?'

ತಾರಾಬಾಯಿ ಮಾತನಾಡಲಿಲ್ಲ.

ಮತ್ತೊಂದು ದಿನ ತಾರಾಬಾಯಿ ರಮಾಬಾಯಿಯ ಬಗ್ಗೆ ಹೇಳಿದಾಗ ನಾನು ಹೇಳಿದೆ, 'ಈಗ ಅವಳ ಬಗ್ಗೆ ಮಾತನಾಡೋ ಅಗತ್ಯವಿದೆಯಾ?'

'ನೀವು ಕೇಳಲ್ವ?'

ನಾನು ಇಲ್ಲವೆಂಬಂತೆ ತಲೆಯಾಡಿಸಿದೆ.

ಒಂದು ಮದುವೆ ಊಟದ ಸಮಾರಂಭದಲ್ಲಿ ಒಬ್ಬರು ನನಗೆ ನಾಗಮಣಿ

## ಸೆಲ್ಫಿಗಳು

ಆಗ ಕೆಲವೇ
ಕೆಲವರು
ಶಿಲ್ಪಿಗಳು!
ಈಗ
ಎಲ್ಲರೂ
ಸೆಲ್ಫಿಗಳು!

—ಬಾಲು ಪಟಗಾರ

